# ಸಂಖ್ಯಾ (ಸಾಧನಾ) ಸುಳಾದಿ

ಹರಿದಾಸನಾಗಿ ಸಂಚರಿಸು ಸಂತೋಷದಲಿ ।
ಗುರುಹಿರಿಯ ಪಾದಕ್ಕೆರಗು ಬಿಡದೆ ॥

**–ಧ್ರುವತಾಳ–**

೧. ಎರಡೊಂದು ತಿಳಿದು = (ಎರಡು+ಒಂದು=ಮೂರು) – ಬಾಲ್ಯ, ಯೌವನ, ವಾರ್ಧಕ್ಯ
೨. ಮತ್ತೆರಡೊಂದು ಅಳಿದು – ಹೆಣ್ಣು, ಹೊನ್ನು, ಮಣ್ಣು
೩. ಎರಡೊಂದು ಸಂಪಾದಿಸಿ – ಜ್ಞಾನ, ಭಕ್ತಿ, ವೈರಾಗ್ಯ
೪. ಎರಡೊಂದು ಶುಚಿಯಲ್ಲಿ – ಕಾಯ, ವಾಕ್, ಮನಸ್ಸು
೫. ಎರಡೊಂದು ಸೈರಿಸುತ – ಅಧ್ಯಾತಿಮಕ, ಆದಿದೈವಿಕ, ಆದಿಭೌತಿಕ
೬. ಎರಡೊಂದು ಕಾಲದಲ್ಲಿ – ಪ್ರಾತಃ, ಮಧ್ಯಾಹ್ನ, ಸಾಯಂಕಾಲ
೭. ಎರಡೊಂದು ಗುಣಗಳಿಗೆ – ಸತ್ವ, ರಜ, ತಮ
೮. ಎರಡೊಂದು ರೂಪನೆಂದು – ಬ್ರಹ್ಮ, ವಿಷ್ಣು, ಮಹೇಶ್ವರ
೯. ಎರಡೊಂದು ಲೋಕವನ್ನು – ಸ್ವರ್ಗ, ಮರ್ತ್ಯ, ಪಾತಾಳ
೧೦. ಎರಡೊಂದು ಮಾಳ್ಪನ್ನ – ಸೃಷ್ಟಿ, ಸ್ಥಿತಿ, ಲಯ
೧೧. ಎರಡೊಂದು ಅವಸ್ಥೆಯಲಿ – ಜಾಗ್ರುತ, ಸ್ವಪ್ನ, ಸುಷುಪ್ತಿ
೧೨. ಎರಡೊಂದು ಉಳ್ಳಮೇಲು – ಶ್ರವಣ, ಮನನ, ಧ್ಯಾನ
೧೩. ಎರಡೊಂದು ಕಾಯನೋಡು – ಸ್ವರೂಪ, ಲಿಂಗ, ಸ್ಥೂಲ
೧೪. ಎರಡೊಂದು ಸಾರಿ ಕಾಯಾಕಳಿಯೋ – ಸಂಚಿತ, ಆಗಾಮಿ, ಪ್ರಾರಬ್ಧ
೧೫. ಎರಡೊಂದು ಅಕ್ಷರಗಳ – ಅಕಾರ, ಉಕಾರ, ಮಕಾರಗಳ ಸಮಷ್ಟಿಯಾದ ಓಂಕಾರವನ್ನು
೧೬. ಎರಡೊಂದು ಸಾರಿ ನೆನೆದು – ತ್ರಿಕಾಲಗಳಲ್ಲಿ ಜಪಿಸಿ
೧೭. ಎರಡೊಂದು ಸ್ಥಾನ ಸೇರು – ಶ್ವೇತದ್ವೀಪ, ಅನಂತಾಸನ, ವೈಕುಂಠ ಎಂಬ ತ್ರಿಧಾಮವನ್ನು ಸೇರು
೧೮. ಎರಡೊಂದು ಶೂನ್ಯ ವಿಜಯ ವಿಟ್ಠಲ – ಸತ್ವ, ರಜ, ತಮ
೧೯. ಎರಡೊಂದು ರೂಪ ಭಜಿಸಿ – ಅಗ್ರೇಶ, ಮೂಲೇಶ, ಪ್ರಾದೇಶ
೨೦. ಎರಡೊಂದೊಂದಾವರ್ತಿ ಪೊಳೆವ – ವಾಸನಾಮಯ, ಅಪರೋಕ್ಷ (ಸ್ಥೂಲ),
ಬಿಂಬಪರೋಕ್ಷ ॥ ೧ ॥

**–ಮಟ್ಟತಾಳ–**

೧. ಮೂರೊಂದು ಯುಗದಲ್ಲಿ = (ಮೂರು+ಒಂದು=ನಾಲ್ಕು) – ಕೃತ, ತ್ರೇತ, ದ್ವಾಪರ, ಕಲಿಯುಗಗಳಲ್ಲಿ
೨. ಮೂರೊಂದು ವರ್ಣವ – ಬಿಳಿ, ಕೆಂಪು, ಹಳದಿ, ನೀಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪನಾಗಿ ಅನುಗ್ರಹಿಸಲು ಅವತರಿಸುವವನು: ಮೋಕ್ಷ, ಸಂಹಾರ, ಸೃಷ್ಟಿ, ಪಾಲನೆ.
೩. ಮೂರೊಂದು ಕಡೆ ಬಿಂಬ – ಸ್ವರೂಪ, ಲಿಂಗ, ಸೂಕ್ಷ್ಮ ಮತ್ತು ಸ್ಥೂಲ ದೇಹಗಳಲ್ಲಿರುವವನು
೪. ಮೂರೊಂದು ಭಜಿಸಿ – ಸತ್, ಚಿತ್, ಆನಂದ ಮತ್ತು ಆತ್ಮ ಎಂಬ ಚತುರ್ಗುಣಗಳಿಂದ ಉಪಾಸನೆ ಮಾಡು
೫. ಮೂರೊಂದು ಪುರುಷಾರ್ಥ – ಧರ್ಮ, ಅರ್ಥ, ಕಾಮ ಮೋಕ್ಷಗಳನ್ನು ನೀಡುವವನು
೬. ಮೂರೊಂದಾದಿ ಬೇಡು – ಸಾರೂಪ್ಯ, ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ
೭. ಮೂರೊಂದು ಮೊಗನಯ್ಯ ವಿಜಯವಿಟ್ಠಲರೇಯ – ನಾಲ್ಕು ಮೊಗವುಳ್ಳ ಬ್ರಹ್ಮದೇವನ ಅಯ್ಯನಾದ ವಿಜಯವಿಟ್ಠಲನನ್ನು
೮. ಮೂರೊಂದುಪಾಯದಲಿ – ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ವೈರಾಗ್ಯಗಳಿಂದ ಅವನನ್ನು ತಿಳಿಯಬೇಕು.
೯. ಮೂರೊಂದು ಪ್ರಳಯ ಮಾಳ್ಪ – ದಿನ, ಆತ್ಯಂತಿಕ, ಪ್ರಾಕೃತ, ನೈಮಿತ್ತಿಕ ಪ್ರಳಯಗಳನ್ನು ಮಾಡುವವನು ॥ ೨ ॥

**–ತ್ರಿವಿಡಿತಾಳ–**

೧. ನಾಲ್ಕೊಂದು ಭೇದವ ನಿಜವೆಂದು ತಿಳಿದು = (ನಾಲ್ಕು+ಒಂದು=ಐದು) – ಜೀವೇಶ್ವರ ಭೇದ, ಜೀವಜಡ, ಜಡ–ಜಡಭೇದ, ಜಡೇಶ್ವರ, ಜೀವ ಜೀವ ಭೇದ ಹೀಗೆ ಪಂಚಭೇದಗಳು
೨. ನಾಲ್ಕೊಂದಾತ್ಮಕವಾದ ಬ್ರಹ್ಮಾಂಡದಿ – ಪೃಥ್ವಿ, ಅಪ್, ತೇಜ, ವಾಯು, ಆಕಾಶ
೩. ನಾಲ್ಕೊಂದು ಬಗೆಯವರು ಯೋಗ್ಯವಂತರೆಂದು – ದೇವ, ಋಷಿ, ಪಿತೃ, ರಾಜರು, ಮನುಷ್ಯರು
೪. ನಾಲ್ಕೊಂದು ಸಂಪದ ಇಪ್ಪವೆಂದು – ಸಾಮೀಪ್ಯ, ಸಾಲೋಕ್ಯ, ಸಾರೋಪ್ಯ, ಸಾಯುಜ್ಯ, ಜೀವನ್ಮುಕ್ತಿ
೫. ನಾಲ್ಕೊಂದು ಕೋಶದಲಿ ವಾಸವಾಗಿ ಇದ್ದು – ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ
೬. ನಾಲ್ಕೊಂದು ಪರ್ವದಲಿ ತಿರುಗದಲೆ – ತಮ, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ
೭. ನಾಲ್ಕೊಂದು ಮುದ್ರೆಗಳ ಧರಿಸುತಲಿ – ಚಕ್ರ, ಶಂಖ, ಗದಾ, ಪದ್ಮ, ನಾರಾಯಣ ಮುದ್ರೆಗಳು
೮. ನಾಲ್ಕೊಂದು ಯಜ್ಞಗಳ ತಿಳಿದು ಮಾಡಿ ನಿತ್ಯ – ದೇವ, ಋಷಿ, ಪಿತೃ, ಭೂತ, ಅತಿಥಿ ಯಜ್ಞಗಳು – ಪಂಚಯಜ್ಞಗಳು

೯. ನಾಲ್ಕೊಂದು ಇಂದ್ರಿಯಗಳ ಬಂಧಿಸುತಲಿ – ಶ್ರೋತೃ, ಚಕ್ಷು, ಸ್ಪರ್ಷ, ರಸನಾ, ಘ್ರಾಣ – ಪಂಚ ಜ್ಞಾನೇಂದ್ರಿಯಗಳು

೧೦. ನಾಲ್ಕೊಂದು ಹಾದಿಗೆ ಎರಗದಿರೊ ಎಂದೂ – ಕಾಮ, ಕ್ರೋಧ, ಲೋಭ, ಮೋಹ, ಮದ

೧೧. ನಾಲ್ಕೊಂದು ಅವರ ಪಾಲ – ಮುಕ್ತರು, ಮುಕ್ತಿಯೋಗ್ಯರು, ನಿತ್ಯಸಂಸಾರಿ, ತಾಮಸರು, ತಮೋಯೋಗ್ಯರು ಎಂಬ ಐವರು ಅಸ್ವತಂತ್ರರನ್ನು ಪಾಲಿಸುವವನು

೧೨. ನಾಲ್ಕೊಂದು ಬಿಡಿಸುವ – ವಿಜಯವಿಟ್ಠಲರೇಯ – ಪಂಚಭೇದಾತ್ಮಕ ಪ್ರಪಂಚಗಳಿಂದ ಬಿಡಿಸಿ

೧೩. ನಾಲ್ಕೊಂದು ಕೊಡುವನೋ – ಪಂಚರೂಪಗಳಲ್ಲಿ ಒಚಿದಾದ ವಾಸುದೇವನ ದರ್ಶನ ಭಾಗ್ಯ ಕೊಡುವನು ॥ ೩ ॥

**–ಅಟ್ಟತಾಳ–**

೧. ಐದೊಂದು ಉಪದ್ರವ ಮುಗಿಸು = (ಐದು+ಒಂದು=ಆರು) – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಷಡ್ರಿಪುಗಳನ್ನು ಬರದಂತೆ ನೋದಿಕೋ

೨. ಐದೊಂದು ಕರ್ಮ ಮಾಡುತಲಿರು – ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹವೆಂಬ ಷಟ್ಕರ್ಮ ನಿರತನಾಗಿರು

೩. ಐದೊಂದು ಮತಕೆ ನಮ್ಮ ಮತವೇ ಅಧಿಕವೆನ್ನು – ಶಾಕ್ತ, ಪಾಶುಪತ, ಗಾಣಪತ್ಯ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತಗಳಲ್ಲಿ ದ್ವೈತ ಮತವೇ ಶ್ರೇಷ್ಟವಾದುದೆನ್ನು

೪. ಐದೊಂದು ರುಚಿ ಬಿಡು ಹರಿನಾಮವೇ ರುಚಿ ಎನ್ನು – ಮಧುರ, ಹುಳಿ, ಉಪ್ಪು, ಕಟು, ಕಹಿ, ಒಗರು ರಸಗಳಲ್ಲಿ ಹರಿನಾಮ ರಸವೇ ಉತ್ತಮ ರಸವೆಂದು ತಿಳಿ

೫. ಐದೊಂದು ರಥಿಕರ ಜರಿದ ವಿಜಯ ವಿಟ್ಠಲನ್ನ – ಭೀಷ್ಮ, ದ್ರೋಣ, ಕೃಪ, ಕರ್ಣ, ಶಲ್ಯ, ಅಶ್ವತ್ಥಾಮರನ್ನು ಸಂಧಿಕಾಲದಲ್ಲಿ ಜರಿದು ವಿದುರನ ಮನೆಗೆ ಹೋದ ವಿಜಯ ವಿಟ್ಠಲನ್ನ ಭಜಿಸು

೬. ಐದೊಂದು ಸ್ಥಳದಲ್ಲಿ ತಿಳಿಯೋ ನಿರ್ಮಲನಾಗಿ – ಮೂಲಾಧಾರ, ನಾಭಿ, ಹೃದಯ, ತುಂದಿ, ಕಂಠ, ಭ್ರೂಮಧ್ಯೆಯಿರುವ ಆರು ಕಮಲಗಳು ॥ ೪ ॥

**–ಆದಿತಾಳ–**

೧. ಆರೊಂದು ಜಡವುಳ್ಳ ನಿನ್ನದು ಅಲ್ಲ = (ಆರು+ಒಂದು=ಏಳು) – ಚರ್ಮ, ತ್ವಕ್, ರುಧಿರ, ಮಾಂಸ, ಮಜ್ಜ, ಮೇಧಸ್ಸು, ಅಸ್ಥಿ ಏಳು ತೊಗಟೆಗಳ ಸಮೂಹವಾದ ಈ ದೇಹ ಪರತಂತ್ರ

೨. ಆರೊಂದು ಅಂಬುಧಿಯಷ್ಟು ಕರ್ಮವು ನಿನ್ನದು – ಕ್ಷಾರೋಧ, ಇಕ್ಷುರಸೋಧ, ಘೃತೋಧ, ಕ್ಷೀರೋಧ, ದಧಿ, ಮಂಡೋಧ, ಶುದ್ಧೋಧ ಎಂಬ ಸಪ್ತಸಮುದ್ರದಷ್ಟು ಕರ್ಮವಿದೆ.

೩. ಆರೊಂದು ವರದಲ್ಲಿ ಶಿಕ್ಷಿಪ ಯಮನು – ನಿತ್ಯಾನಿತ್ಯ ನರಕಗಳು – ತಾಮಿಸ್ರ, ಅಂಧತಾಮಿಸ್ರ, ನಿತ್ಯ ನರಕಗಳು – ಕಾರವ, ಮಹಾಕಾರವ, ವಹ್ನಿ, ವೈತರಣೀ, ಕುಂಭೀಪಾಕ
೪. ಆರೊಂದು ದ್ವೀಪಗಳ ಆಳಿದವರೆಲ್ಲ – ಸಪ್ತ ದ್ವೀಪಗಳು – ಜಂಬು, ಪ್ಲಕ್ಷ, ಶಾಲ್ಮಲೀ, ಕುಶ, ಕ್ರೌಂಚ, ಶಾಕ, ಪುಷ್ಕರ ಸಪ್ತ ದ್ವೀಪಾಧಿಪತಿಗಳು – ಅಗ್ನೀಧ್ರ, ಅಧ್ಮಜಿಹ್ವ, ಯಜ್ಞಬಾಹು, ಹಿರಣ್ಯರೇತ, ಧೃತಪ್ರಷ್ಠ, ಮೇಧಾತಿಥಿ, ನೀತಿಹೋತ್ರ
೫. ಆರೊಂದು ಹಯನಕಾಲಕ್ಕೆವಿದ್ದು ಸ್ನಾನಾದೀ – ದಿನವೂ ಏಳನೇ ಯಾಮದಲ್ಲಿ (ಬ್ರಾಹ್ಮೀ ಮಹೂರ್ಥದಲ್ಲಿ) ಎದ್ದು ಏಳು ಕರ್ಮ – ಸ್ನಾನ, ಸಂಧ್ಯಾಜಪ, ದೇವತಾರ್ಚನೆ, ಬ್ರಹ್ಮಯಜ್ಞ, ವೈಶ್ವದೇವ, ಬಲಿಹರಣ, ಅತಿಥಿಪೂಜೆ ಮಾಡುತ್ತಿರು
೬. ಆರೊಂದು ಜಿಹ್ವಕೆ ಉಣಿಸಿ ಕರ್ಮಜ್ಞಾನ – ಶ್ರೋತ್ರ, ಸ್ಪರ್ಷ, ಚಕ್ಷು, ರಸನಾ, ಘ್ರಾಣ, ಮನಸ್ಸು, ಜೀವ
೭. ಆರೊಂದು ಗೋತ್ರ ಉದ್ಧಾರ ಮಾಡುತ – ಪಿತಾ, ಪಿತಾಮಹ, ಪ್ರಪಿತಾಮಹ, ಮಾತಾ, ಮಾತಾಮಹಿ, ಪ್ರಪಿತಾಮಹೀ, ಶ್ರಾದ್ಧಕರ್ತಾ (ಜೀವ)
೮. ಆರೊಂದು ಅಂಗವುಳ್ಳ ವಿಜಯ ವಿಟ್ಠಲ ಹರಿಯ – ಸಂವತ್ಸರ, ಆಯನ, ಋತು, ಮಾಸ, ಪಕ್ಷ, ವಾರ, ತಿಥಿಗಳೆಂಬ ಏಳು ಅಂಗಗಳುಲ್ಲ ಕಾಲನಿಯಾಮಕನಾದ ವಿಜಯವಿಟ್ಠಲ ಹರಿಯ
೯. ಆರೊಂದು ವರೊಳು ನಿಮಿಷ ದಾಸನಾಗು – ವಿಷ್ಣು, ಬ್ರಹ್ಮ, ವಾಯು, ಗರುಡ, ಶೇಷ, ರುದ್ರ, ಇಂದ್ರರಲ್ಲಿ ಅನಿಮಿಷನಾದ ದಾಸನಾಗು ॥ ೫ ॥

**–ಜತೆ–**

ಕೊಡಬ್ಯಾಡ ಕೊಳಬ್ಯಾಡ ಸಿರಿವಿಜಯವಿಟ್ಠಲನ್ನ ।
ಅಡಿಗಳ ಅರ್ಧ ನಿಮಿಷ ನಂಬಲು ಕೈವಲ್ಯ ॥ ೬ ॥